
# ಸಂವಾದಕ್ಕೆ ಸಾವಿಲ್ಲ, ಅಸಹನೆಗೆ ಮುಖವಿಲ್ಲ



ಆಧುನಿಕತೆ ಎನ್ನುವುದು ಮನುಷ್ಯರ ನಡುವಿನ ಸಂವಹನವನ್ನು ಕಡಿಮೆ ಮಾಡಿದೆ ಎಂಬ ಕೊರಗಿನ ನಡುವೆ ಅದೇ ಆಧುನಿಕತೆಯ ಜೀವಾಳವಾದ ತಂತ್ರಜ್ಞಾನವು ಸಂವಹನದ ಮೂಲಕವೇ ಜಗತ್ತನ್ನು ಒಂದು ಗ್ರಾಮವನ್ನಾಗಿ ಕುಗ್ಗಿಸಿದೆ. ನಿನ್ನೆ ಹೊಸದಾಗಿ ಹೊಳೆಯುತ್ತಿದ್ದದ್ದು ನಾಳೆಗೆ ಹಳೆಯದಾಗುವ ತಾಂತ್ರಿಕ ವೇಗ ಇಂದಿನದು. ನಮ್ಮ ಈ ಕಾಲದಲ್ಲಿ, ತಂತ್ರಜ್ಞಾನವೂ ಕಾಲದ ಜೊತೆಗೆ ರೆಕ್ಕೆ ಕಟ್ಟಿಕೊಂಡು ಹಾರುತ್ತಿದೆ. ಆದರೆ ಕಾಲ ಯಾವುದಾದರೇನು, ತಂತ್ರಜ್ಞಾನ ಎಂಥದಾದರೇನು, ಮೌಲ್ಯಗಳ ಮಾನ ಕದಲಬಾರದು.

ಸಂಪರ್ಕ, ಸಂವಹನ, ಸಂವಾದಗಳಿಗೆ ಫೇಸ್‌ಬುಕ್ ಅದ್ಭುತವಾದ ಮಾಧ್ಯಮ. ಅದು ಆಧುನಿಕ ಜೀವನದ ತಂತ್ರಜ್ಞಾನಾಧಾರಿತ ಮುಖಗಳಲ್ಲಿ ಒಂದೆನ್ನುವುದು, ಅದರಲ್ಲಿ ಮುಕ್ತ ಅಭಿವ್ಯಕ್ತಿಗೆ ಅವಕಾಶವಿರುವುದು ನಿಜ. ಪರತತ್ವ, ಪರವಿಚಾರಗಳನ್ನು ಕುರಿತ ಸಹನೆಯೇ ನಮ್ಮ ಬಹುಮುಖಿ ಸಂಸ್ಕೃತಿಯ ಸಾರವೆನ್ನುವುದೂ ಅಷ್ಟೇ ನಿಜ. ಹಳೆಯದನ್ನು ಕುರಿತ ಹೊಸ ಮಂಥನಕ್ಕೆ ಫೇಸ್‌ಬುಕ್ ಇಂದು ಸೂಕ್ತ ವೇದಿಕೆ. ಜಗತ್ತಿನ ಪ್ರಜಾಪ್ರಭುತ್ವವಾದಿ ದೇಶಗಳ ಸಂವಿಧಾನಗಳ ಮೂಲತತ್ವವಾದ ಅಭಿವ್ಯಕ್ತಿ ಸ್ವಾತಂತ್ರ್ಯ ಇಂಥ ಮಂಥನಕ್ಕೆ ಬೆಂಗಾವಲಾಗಿ ಇರುತ್ತದೆ. ಗಾಂಭೀರ್ಯದ ಚೌಕಟ್ಟಿನಲ್ಲಿ ವಿಚಾರಗಳನ್ನು ಮಂಡಿಸುವ ಹಕ್ಕು ಸಮಾಜದ ಆರೋಗ್ಯಕ್ಕೆ ಅತ್ಯಗತ್ಯ. ಆದರೆ ಸರ್ವಾಧಿಕಾರ, ಸನಾತನವಾದ ಮತ್ತು ಮೂಲಭೂತವಾದಗಳು ಎಂದಿನಂತೆ ಈ ಹಕ್ಕನ್ನು ಒಪ್ಪುವುದಿಲ್ಲ. ಅವುಗಳನ್ನು ನಂಬುವವರಲ್ಲಿ ಸಣ್ಣಪುಟ್ಟ ಟೀಕೆಟಿಪ್ಪಣಿಗಳೂ ಹೆದರಿಕೆ ಹುಟ್ಟಿಸಿ ಅಸಹ್ಯಕರ ಆಕ್ರೋಶವೇ ಅವರ ಅಸ್ತ್ರವಾಗುತ್ತದೆ. ಆದರೆ ವೈಯಕ್ತಿಕ ದಾಳಿ ವೈಚಾರಿಕ ದಿವಾಳಿತನದ ಸಂಕೇತ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿರುವ ನಮ್ಮ ಸಂವಿಧಾನ, ಅದರ ರಕ್ಷಣೆಗೂ ಬದ್ಧವಾಗಿದೆ. ಜನಪರ ಚಳವಳಿಗಳು ಆ ಕುರಿತು ಕಟ್ಟೆಚ್ಚರ ವಹಿಸದೆ ಇರುವುದಿಲ್ಲ. ಅಸಹನೆಯ ವಿಷ ಕಕ್ಕಿ ವಿಚಾರವನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಫೇಸ್‌ಬುಕ್‌ನಲ್ಲಿ ಮಾತ್ರವಲ್ಲ ಎಲ್ಲ ಕಡೆ ಅಸಹನೆಗೆ ಮುಖಭಂಗ ಖಂಡಿತ.

**-ಆರ್. ಪೂರ್ಣಿಮಾ**